1330 (1648) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಕಟ್ಟಡದ ನವೀಕರಣ ಕಾರ್ಯದ ಪ್ರಗತಿಯ ವಿವರಗಳೇನು;

ಆ) ಕಟ್ಟಡ ನವೀಕರಣ ಕಾಮಗಾರಿಯ ಹೊಣೆಯನ್ನು ಯಾರಿಗೆ ವಹಿಸಿಕೊಡಲಾಗಿದೆ ಕಾಮಗಾರಿ ಮುಕ್ತಾಯಕ್ಕೆ ಕಾಲ ನಿಗದಿ ಪಡಿಸಲಾಗಿದೆಯೇ ನವೀಕರಣ ಕಾರ್ಯಕ್ಕೆ ಸರ್ಕಾರ ಉದಾರವಾಗಿ ಆರ್ಥಿಕ ನೆರವನ್ನು ಮಂಜೂರು ಮಾಡಿದೆಯೇ;

ಇ) ಕನ್ನಡ ಸಾಹಿತ್ಯ ಪರಿಷತ್ ವ್ಯಾಪ್ತಿಯಲ್ಲಿರುವ ಜಮೀನನ್ನು ಸೂಕ್ತ ರೀತ್ಯಾ ಬಳಸಿಕೊಂಡು ಆಧುನಿಕ ಮತ್ತು ನಾಡುನುಡಿಯ ಪರಂಪರೆ ಅನುಗುಣವಾಗಿ ನವೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಕಟ್ಟಡದ ನವೀಕರಣ ಕಾಮಗಾರಿ ಪ್ರಾರಂಭಿಸಿರುವುದಿಲ್ಲ.

ಆ) ಅ) ಕಟ್ಟಡ ನವೀಕರಣ ಕಾಮಗಾರಿ ಹೊಣೆಯನ್ನು ಯಾರಿಗೂ ವಹಿಸಿರುವುದಿಲ್ಲ. ಕಾಲ ನಿಗಧಿ ಪಡಿಸಲಾಗಿಲ್ಲ.

ಆ) ಉದ್ದೇಶಿತ ಕಾಮಗಾರಿಗೆ 2006–07ನೇ ಸಾಲಿನಲ್ಲಿ ರೂ. 1.00 ಕೋಟಿ ಅನುದಾನ ಆಯವ್ಯಯದಲ್ಲಿ ಘೋಷಣೆಯಾಗಿದ್ದು ಕಟ್ಟಡ ಕಾಮಗಾರಿಗೆ ಸಂಬಂಧಪಟ್ಟಂತೆ ಅಗತ್ಯ ಅಂದಾಜು ವೆಚ್ಚ ನೀಲಿ ನಕಾಶೆ ವಿವರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರು ಸಕಾಲದಲ್ಲಿ ಸಲ್ಲಿಸದ ಕಾರಣ ಹಣ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ, ಪ್ರಸಕ್ತ ಸಾಲಿನಲ್ಲಿ ರೂ. 1.00 ಕೋಟಿಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಹಣ ಮಂಜೂರಾತಿ ಸಂಬಂಧ ಸರ್ಕಾರದ ಪರಿಶೀಲನೆ ಹಂತದಲ್ಲಿ ಇದ್ದು ಮಂಜೂರಾತಿ ದೊರೆತ ಕೂಡಲೆ ನವೀಕರಣ ಕಾರ್ಯ ಕೈಗೆತ್ತಿಕೊಳ್ಳಲು ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಗೆ ಸೂಚನೆ ನೀಡಲಾಗುವುದು.